# ಕೈವಾರ ತಾತಯ್ಯ

'ಸತ್ತದನಗಳ ತೊಗಲು/ ನುಡಿಸುವುದು ನಾನಾ ನಾದಧ್ವನಿ / ಕಲ್ಲು ದೇವರುಗಳು ನುಡಿಯರಯ್ಯ/ ನಾದ ಬ್ರಹ್ಮಾನಂದ ನಾರೇಯಣ ಕವಿ'.– ಅಧ್ಯಾತ್ಮವೆನ್ನುವುದು ಕೇವಲ ಅಕ್ಷರಜ್ಞಾನ, ಬಲ್ಲವರ ಸೊತ್ತು ಎಂಬ ರೂಢಿಗತ ನಂಬಿಕೆಯನ್ನು ಮುರಿದು ಅದನ್ನು ಜನಸಾಮಾನ್ಯರ ಬಳಿಗೆ ತಂದ ಹಲವರು ಸಂತರು ನಮ್ಮಲ್ಲಿದ್ದಾರೆ. ಅವರು ನಮ್ಮ ಹಾಗೆ ಸಾಧಾರಣರಾಗಿ ಬದುಕಿ, ಬದುಕಿನ ಗೂಢಗಳನ್ನು ಅರಿತವರು. ಕರ್ನಾಟಕವೆನ್ನುವುದು 'ಬೆರಕೆ ಸೊಪ್ಪಿನ ಕಂತೆ' ಎಂದು ಮೊದಲು ಕರೆದವನು ಕೈವಾರ ನಾರಣೇಯ ಎಂಬ ನಮ್ಮ ನಡುವಿನ ಸಂತ. ಈ ಸಂತರೆಲ್ಲ ನಮ್ಮ, ನಿಮ್ಮ ಹಾಗೆ ನಾವು ಕಟ್ಟಿಕೊಂಡ ಸಂಸಾರದಲ್ಲಿ ಈಸಿದವರು. ಈಸಿ ಜೈಸಿದವರು. ಆದರೆ ಸಂಸಾರವೆಂಬ ಗೂಟಕ್ಕೆ ಕಟ್ಟಿಕೊಂಡವರಲ್ಲ. ಭವಸಾಗರವನ್ನು ಬಳಸಿ ಮುಕ್ತಿಪಥದ ಕಡೆಗೆ ನಡೆದವರು.

ಇಂತಹ ಸಾಧಕರಲ್ಲಿ ಕೈವಾರ ನಾರಣೇಯ ಕೂಡ ಒಬ್ಬನು. ಇವನನ್ನು ಜನ ಪ್ರೀತಿಯಿಂದ ತಾತಯ್ಯ ಎಂದು ಕರೆದರು. ಸರ್ವಜ್ಞನನ್ನು ಒಳಗೊಂಡಂತೆ ಹಲವು ಸಂತರ ಹಿಂದಿನ ಬದುಕಿನ ಬಗೆಗೆ ನಮಗೆ ನಿರ್ದಿಷ್ಟ ದಾಖಲೆಗಳು ದೊರೆಯುವುದಿಲ್ಲ. ಹಾಗೆಯೇ ಕೆಲವು ಪುರಾತನ ವಚನಕಾರರ, ದಾಸರ, ತತ್ವಪದಕಾರರ ಜೀವನದ ಬಗೆಗೂ ಸ್ಪಷ್ಟ ಮಾಹಿತಿ ದೊರೆಯುವುದಿಲ್ಲ. ಮೊದಲನೆಯದಾಗಿ ಅವರು ತಮ್ಮ ಬಗ್ಗೆ ಏನನ್ನೂ ಹೇಳಿಕೊಳ್ಳದಿರುವುದು ಹಾಗೂ ತಮ್ಮ ರಚನೆಗಳನ್ನು ತಾವೇ ಬರೆಯದಿರುವುದು. ಜೊತೆಯಲ್ಲಿ ಏನನ್ನೂ ಪುರಾವೆಯಾಗಿ ಉಳಿಸಿ ಹೋಗಿರುವುದಿಲ್ಲ. ಎರಡನೆಯದಾಗಿ ಅವರ ಸರೀಕರು, ಅನುಯಾಯಿಗಳು ತಮಗೆ ಸರಿದೋರಿದಂತೆ ಅವರ ಬಗ್ಗೆ ಸಂಗತಿಗಳನ್ನು ದಾಖಲಿಸಿರುವುದು. ಅಸ್ಪಷ್ಟತೆಯಲ್ಲೇ ಸ್ಪಷ್ಟತೆಯನ್ನು ಕಂಡುಕೊಳ್ಳುವ ಪ್ರಯತ್ನ ಮಾಡಬೇಕಾಗುತ್ತದೆ.

ತಾತಯ್ಯ ವೃತ್ತಿಯಿಂದ ಬಳೆ ಮಾರುವವನು. ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿ ತನ್ನ ಅನುಭಾವದ ಚಿಂತನೆಗಳನ್ನು ಹಂಚಿಕೊಂಡವನು. ಮಲಾರವನ್ನು ಹೊತ್ತು ಹೊಟ್ಟೆಪಾಡಿಗಾಗಿ ಅಲೆಯುತ್ತಿದ್ದ ಹಾಗೂ ಬದುಕಿನ ತಿಳಿವಳಿಕೆಗಳನ್ನು ಗ್ರಹಿಸುತ್ತಿದ್ದ. ಲಾಭ ಗಳಿಸದೆ ಮೈತುಂಬಾ ಸಾಲ ತುಂಬಿಕೊಂಡ. ಅಧ್ಯಾತ್ಮಕ್ಕೂ, ವ್ಯಾಪಾರಕ್ಕೂ ಎಲ್ಲಿಯ ಸಂಬಂಧ.

ಅವನ ಮಾತೃಭಾಷೆ ತೆಲುಗಾಗಿದ್ದರೂ ಕನ್ನಡದಲ್ಲಿಯೂ ಪ್ರಭುತ್ವವಿತ್ತು. ಅವನ ಸಾಂಸಾರಿಕ ಜೀವನದ ಬಗ್ಗೆ ಮಾಹಿತಿಗಳಿಲ್ಲ. ಒಮ್ಮೆ ಚಿತ್ತೂರಿನ ವೆಂಕಟಗಿರಿಯ ಕಣಿವೆಯಲ್ಲಿ ತಂಗಿದ್ದಾಗ ಅವನಿಗೆ ಸದ್ಗುರು ಪರದೇಶಸ್ವಾಮಿಯ ದರ್ಶನವಾಗುತ್ತದೆ. ಈ ಗುರುವೇ ತಾತಯ್ಯನವರಿಗೆ ದೀಕ್ಷೆ ಕೊಡುತ್ತಾರೆ. ಗುರುದೀಕ್ಷೆ ಪಡೆದ ಐವತ್ತು ವರ್ಷದ ತಾತಯ್ಯ ಸಂಸಾರವನ್ನು ತ್ಯಜಿಸಿ ಕೈವಾರದ ನರಸಿಂಹಸ್ವಾಮಿಯ ಗುಹೆ ಸೇರಿ ಮೂರುವರ್ಷಗಳ ಕಾಲ ಯೋಗಸಾಧನೆ ಮಾಡುತ್ತಾರೆ.

ಅಪೂರ್ವವಾದ ಮಾನಸಿಕ ಸಿದ್ಧಿಯನ್ನು ಪಡೆದ ಸಾಧು ಸಂತರು ಜಾತಿಮತ, ಪಂಥಗಳಿಂದಾಚೆ ತಮ್ಮನ್ನು ಮನುಕುಲದೊಂದಿಗೆ ಕಂಡುಕೊಳ್ಳುತ್ತಾರೆ. ಜಾತಿಮತ, ಪಂಥಗಳಿಗೆ ಸೇರಿದವರು ತಮ್ಮ, ತಮ್ಮ ಮಠ ದೇಗುಲಗಳಲ್ಲಿ ಬಂಧಿಯಾಗುತ್ತಾರೆ. ಬಂಧನಕ್ಕೂ, ಬಂಧುತ್ವಕ್ಕೂ ಹತ್ತಿರವಾದ ಸಂಬಂಧ. ಅದು ಯಾರನ್ನೂ ಬೆಳೆಯದ ಹಾಗೆ ತನ್ನ ಗೋಡೆಗಳೊಳಗೆ ಕೂಡಿಹಾಕಿಕೊಳ್ಳುತ್ತದೆ. ಶಿಶುನಾಳ ಶರೀಫನಂತಹ ಯೋಗಿಗಳು ಮಾತ್ರ 'ಇವ ನಮ್ಮವ, ಇವ ನಮ್ಮವ' ಎಂದು ಕರೆಸಿಕೊಳ್ಳಲು ಸಾಧ್ಯ.

ಪಕ್ವತೆಯನ್ನು ಪಡೆದ ತಾತಯ್ಯ ಗುಹೆಯಿಂದ ಹೊರಬಂದು ಬಯಲಲ್ಲಿ ನಿಲ್ಲುತ್ತಾನೆ. ದೇಹ ಮತ್ತು ಆತ್ಮಗಳ ಸಂಬಂಧದ ತೊಡಕುಗಳನ್ನು ಕುರಿತು ಶೋಧನೆಗೆ ತೊಡಗುತ್ತಾರೆ. ಭಾರತೀಯ ತತ್ವ ಮೀಮಾಂಸೆಯಲ್ಲಿ ಜೀವಾತ್ಮಗಳನ್ನು ಕುರಿತ ಚರ್ಚೆ ಎಂದಿನಿಂದಲೂ ನಡೆದು ಬಂದಿದೆ. ಕಂಡವರು ಕಂಡಂತೆ, ಕಾಣಿಸಿದಂತೆ ಅರಿಯುವ ಪ್ರಯತ್ನ ಮಾಡಿದ್ದಾರೆ. ಓಶೋನನ್ನು ಒಳಗೊಂಡಂತೆ ಸಿದ್ಧೇಶ್ವರ ಸ್ವಾಮಿಯವರೆಗೂ ಬದುಕಿನ ತತ್ವಗಳ ಚರ್ಚೆ ನಡೆಯುತ್ತಲೇ ಬಂದಿದೆ.

ತಾತಯ್ಯ ಒಂದೆಡೆ ಕುಳಿತು ವೇದಶಾಸ್ತ್ರಗಳನ್ನು ಅಧ್ಯಯನ ಮಾಡಿದವನಲ್ಲ. ಸರ್ವಜ್ಞನ ಹಾಗೆ ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ಎಲ್ಲ ಕಡೆ ಚಲಿಸುತ್ತಾನೆ. ಈ ನಿರಂತರ ಚಲಿಸುವಿಕೆ ಅವನಿಗೆ ಕರ್ನಾಟಕದ ವಿವಿಧ ಧರ್ಮಿಯರ ಸಂಪರ್ಕ ಸಿಗುತ್ತದೆ. ಈ ಅರ್ಥದಲ್ಲೇ ಅವನು 'ಕರ್ನಾಟಕವೆಲ್ಲ ಬೆರಕೆಸೊಪ್ಪಿನ ಗೂಡೆ, ತಬ್ಬಲಿ ಗುರುಗಳ ದಂಡಿಸದಾದರು' ಎನ್ನುತ್ತಾನೆ. ವಿವಿಧ ಧರ್ಮಗಳನ್ನು ಹೊಂದಿದ ಕರ್ನಾಟಕ ಕುರಿತಾದ ಈ ಚಿಂತನೆ ಬಹು ದೊಡ್ಡದು. ಬೆರಕೆಸೊಪ್ಪು ವಿವಿಧತೆಯಲ್ಲಿ ಏಕತ್ರವಾದ ವಿಶೇಷವಾದ ಸ್ವಾದವನ್ನು ಹೇಳುವಂತದ್ದು. ತಾತಯ್ಯನವರ ರಚನೆಗಳನ್ನು ಸೀಸಪದಗಳೆಂದು, ವಚನಗಳೆಂದು ಕರೆಯಲಾಗಿದೆ. ಇವು ಗಾಯನಕ್ಕೆ ಒದಗಿ ಬರುವ ತತ್ವಪದಗಳೂ ಆಗಿವೆ.

ಮಾನವರು ಎಂತಹವರ ಜೊತೆ ಬೆರೆಯಬೇಕು, ಬೆರೆಯಬಾರದು ಎನ್ನುವುದನ್ನು 'ಇರದಿರು ಊರ ಬಾಗಿಲಲಿ, ಇರದಿರು ಬೆಟ್ಟದ ಗುಹೆ ಕುಹಕಿಗಳ ಸಭೆಯಲ್ಲಿ' ಎನ್ನುವ ರಚನೆಯ ಮೂಲಕ ಹೇಳುತ್ತಾರೆ. ದಾನಕೊಟ್ಟೆವು ಎಂದು ಲೆಕ್ಕವಿಟ್ಟುಕೊಂಡು ಬೀಗುವವರನ್ನು ಕುರಿತು 'ಬರೆಯದಿರು ದಾನ ಧರ್ಮವ, ಬರೆಯದಿರು ಇಲ್ಲದ ಲೆಕ್ಕ ಮಂತ್ರಕ್ರಿಯೆಗಳ' ಎಂದು ಎಚ್ಚರಿಸುತ್ತಾರೆ. ನೆರಳನ್ನು, ಬದುಕನ್ನು ಕೊಡುವ ಮರಗಳನ್ನು ಕತ್ತರಿಸುವವರನ್ನು ಕುರಿತು 'ಫಲ ಕೊಡುವ ಮರಗಳ ಕಡಿವ, ಕಡುಪಾಪಿ ಲೋಕದಲಿ ನಾಯಾಗಿ ಜನಿಸುವನು' ಎನ್ನುತ್ತಾರೆ. ಸಂಸಾರದೊಳಗಿದ್ದೂ ಸಂಸಾರಕ್ಕೆ ಎರವಾಗಿ ಬೇರೆ ಹೆಣ್ಣಿನ ಹಿಂದೆ ಅಲೆವ ಗಂಡುಕುಲವನ್ನು ಕುರಿತು 'ಜೀವ ಫಲವ ಕೊಡುವ ಮಡದಿ ಮನೆಯೊಳಗಿದ್ದು, ವಾರಾಂಗನೆಯರಲ್ಲಿ ಒಲವು ಯಾಕೆ' ಎಂದು ಪ್ರಶ್ನಿಸುತ್ತಾರೆ.

ಕುಲದ ಕನಿಷ್ಠತೆ ಹಾಗೂ ಶ್ರೇಷ್ಠತೆಯನ್ನು ಕುರಿತು ತಾತಯ್ಯ ವಿವೇಕದಿಂದ ಮಾತನಾಡುತ್ತಾನೆ. ಉದಾಹರಣೆಗೆ: 'ಉಚ್ಚೆ ಬಾಗಿಲೊಳು ದೂರಿ ಬಂದರೀ ನರರು, ಉತ್ತಮ ಕುಲದವರು ಯಾರಿಲ್ಲ ಇಲ್ಲಿ', 'ಆರು ಮತದವರು ಪರಿಹಾಸಗೊಂಡರು, ಮತದ ಮೂಲವರಿತ ಮರ್ಮಜ್ಞನಿಲ್ಲ', 'ಹೊಲೆಯನೇಂದೀ ಜನರು ಹೀಗೆಳೆಯುವುದೇತಕ್ಕೆ, ಹೊಲೆಯನ ಆತ್ಮ ಮಂದಿರದಿ, ಸಕಲ ದೇವ ವಿಹಾರಿ ಸದ್ಗುರುವು ಇರುವ'. ಈ ಎಲ್ಲಾ ಕುಲವನ್ನು ಕುರಿತಾದ ರಚನೆಗಳು ಶೂದ್ರನಾಗಿದ್ದು ಅಧ್ಯಾತ್ಮಿಕ ಬಲಪಡೆದ ತಾತಯ್ಯನವರ ಅನುಭವದ ಪದಗಳಾಗಿವೆ.

ಕೋಲಾರದ ಪ್ರದೇಶಕ್ಕೆ ಸೇರಿದ ಈ ಸಂತನನ್ನು ಆ ಭಾಗದ ಜನತೆ ಆರಾಧಿಸುತ್ತಾರೆ. ಇವನ ರಚನೆಗಳನ್ನು ಪ್ರೀತಿಯಿಂದ ಹಾಡುವವರು ಅಪಾರ ಸಂಖ್ಯೆಯಲ್ಲಿದ್ದಾರೆ. ಬದುಕಿನ ಅನಿಶ್ಚಿತತೆ ಕಂಡವರು, ಸಾವುನೋವಿನಲ್ಲಿ ನರಳುವವರು, ಹುಟ್ಟುಸಾವೆಂಬ ಚಕ್ರವನ್ನು ಭವಬಂಧನವೆಂದು ಕಂಡುಕೊಂಡವರು ತಾತಯ್ಯನ ತತ್ವಪದಗಳನ್ನು ಪ್ರೀತಿಯಿಂದ ಅಪ್ಪಿಕೊಂಡಿದ್ದಾರೆ. ಅವನ ಕನ್ನಡ ಹಾಗೂ ತೆಲುಗು ಮಿಶ್ರಿತ ರಚನೆಗಳು ಕೋಲಾರದ ಜನತೆಯನ್ನು ಹಿಡಿದಿಟ್ಟಿವೆ, ಅವರ ಬದುಕಿನಲ್ಲಿ ಬೆರೆತುಹೋಗಿವೆ. ಅವನ ಬದುಕು ಮತ್ತು ಚಿಂತನೆ ಕುರಿತು ಸಾಹಿತಿ ಸ. ರಘುನಾಥ್ ಆಳವಾದ ಅಧ್ಯಯನ ನಡೆಸಿದ್ದಾರೆ. ಅವರ 'ಕೈವಾರ ನಾರಣೇಯ' ಕೃತಿಯಲ್ಲಿ 'ಅರ್ಥವರಿಯದ ಓದುಗಳು, ಏನಿಲ್ಲವದರಲ್ಲಿ ವ್ಯರ್ಥ ಕಾಲಕ್ಷೇಪ, ಚೌಕಾಭಾರ ಆಡಿದಂತಷ್ಟೇ' ಎನ್ನುವ ಸಾಲು ತಾತಯ್ಯನ ಮಹತ್ವವನ್ನು ಎತ್ತಿ ಹಿಡಿಯುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಕೋಪದಿಂದಾಗುವ ತ್ರಿದೋಷಗಳು: ದುಷ್ಟ ಮಾತು, ದ್ರವ್ಯನಾಶ, ಕ್ರೂರಶಾಸನ.

  —ಕೌಟಿಲ್ಯ
- ಸಂಸ್ಕೃತಿಯೇ ಜೀವನ ಕುಸುಮದ ಸುಗಂಧ.

  —ಕೆ. ಹನುಮಂತಯ್ಯ
- ಸೌಂದರ್ಯೋಪಾಸನೆ ಮತ್ತು ಸಾಹಿತ್ಯೋಪಾಸನೆಗಳೇ ಕಲೆಗಳ ಅಂತಿಮ ಉದ್ದೇಶ.

  —ಶಿವರಾಮ ಕಾರಂತ
- ರಾಜಕಾರಣದಲ್ಲಿ ವೈರಿ ಈ ಹೊತ್ತು, ನಾಳೆ ಏನಾಗುವನು? ಉಂಟೇನು ಗೊತ್ತು? ಕೈಲಿ ಸಿಕ್ಕಿದರೆ ಸಾಕಷ್ಟು ನೈವೇದ್ಯ, ಕಡುವೈರಿಯೂ ಗೆಳೆಯನಾಗುವುದು ಸಾಧ್ಯ.

  —ದಿನಕರ ದೇಸಾಯಿ